ಮಂದಿ, ಹೊಲೀಲಿಕ್ಕೆ ಕೊಡಾವ್ರು ಎಲ್ಲಾರೂ ಗಂಗಾನ ಬಗ್ಗೆ ಮಾತಾಡಾವ್ರು. 'ಅಕಿ ಗಂಡ ಯಾಕ ಬಂದಿಲ್ಲಾ? ಅತ್ತೀಮನಿಗೆ ಅಕಿ ಯಾಕ ಹೋಗುದುಲ್ಲಾ? ಅವರ್‍ಯಾಕ ಬರುದುಲ್ಲಾ?' ಅಂತೆಲ್ಲಾ ಕಾರಭಾರ ಸುರು ಮಾಡಿ ಭಾಳ ದಿವ್ಸ ಆಗಿತ್ತು. ಅವ್ವ ಯಾವಾಗರೆ ಸಾಂಗಲಿಗೆ ಕಳಸಿ 'ಅತ್ತಿಮನಿಗೆ ಹೋಗ್ಯಾಳ. ಸೈನ್ಯದಾಗಿಂದ ಗಂಡ ಬಂದಾನ' ಅಂತೆಲ್ಲಾ ಹೇಳಿ ತಿಪ್ಪಿ ಸಾರಸೋ ಕೆಲಸಾ ಮಾಡತಿದ್ಲು. ಆದರ ಕೂಸು ರಾಜು 'ನಮ್ಮಪ್ಪ ಎಲ್ಲೆ?' ಅಂತ ಕೇಳಲಿಕ್ಕೆ, ಅಳ್ಳಿಕ್ಕೆ ಸುರು ಮಾಡಿದಾಗ ಧೊಡ್ಡ ತ್ರಾಸಾತು. ಮನ್ಯಾಗ ಮುಂದ ನೀಲೂನ ಮದಿವ್ಯಾಗಬೇಕಾಗಿತ್ತು. ಹಂಗ ನಮ್ಮೂದ್ದ... ಎಲ್ಲಾದಕ್ಕೂ ಒಂದ ಬಟ್ಟ ಆಗಿ ಕೂಡಬಾರ್ದು ಅಂತ ಗಂಗಾನ ವಿಚಾರ ಮಾಡಿದ್ಲು. ಒಮ್ಮೆ ಸಾಂಗ್ಲಿಗೆ ಹೋದಾಗ 'ಗಂಗಾನ ಗಂಡ ಹೋದ. ಕಾಶ್ಮೀರದಾಗ ಯುದ್ಧ ಮಾಡೋಮುಂದ ಗುಂಡ ಹತ್ತಿ ಸತ್ತ' ಅಂತ ಸುದ್ದಿ ಬಂತು. ಇಲ್ಲದ್ದ ಗಂಡನ್ನ ಸಾಯ್ಸಿದ್ದಾತು. ಅವ್ವ, ನಾವು ಎಲ್ಲಾ ಅತ್ವಿ. ಆದರ ಮುಂದ ಅಕಿ

> **'ಕಟಗೊಂಡಾಂವಾ ಛೊಲೊ ಇರ್ತಾನಂತ ಯಾತರ ಮ್ಯಾಲಿಂದ? ಒಮ್ಮೆ ಅನಭೋಗಿಸಿದ್ದ ಸಾಕು. ಅಲ್ಲದ ಕೂಸಿನ್ನ ಬಿಟ್ಟು ಹೋಗೋ ವಿಚಾರನ ಇಲ್ಲ' ಅಂದಬಿಟ್ಲು. ಎಲ್ಲಾರೂ ಸುಮ್ಮನಾಗಿಬಿಟ್ವಿ. ಹಿಂಗ ಹಳೇ ಅಜ್ಜಿ ಕಥಿವಳಗ ಹೇಳ್ತಾರಲಾ 'ಕಡೀಕ ಎಲ್ಲಾ ಛೊಲೊ ಆತು. ಎಲ್ಲಾರೂ ಆರಾಮ ಇದ್ದರು' ಅಂತ ಹಂಗ ಹೇಳಬಹುದು ನೋಡ್ರಿ...**

ವಿಧವಾನ ವೇಷದಾಗ ಬಂದಾಗ ಖರೇನ ಎಲ್ಲಾರೂ ಅತ್ವಿ. ಅವ್ವ 'ಅಪ್ಪನ ತಪ್ಪಿಗೆ ಭಂಗಾರದಂಥಾ ಹುಡುಗಿ ಏನೂ ಕಾಣದನ ಹೋತು' ಅಂತ ಎದಿ ಬಡಕೊಂಡ್ಲು. ಆದರ ಇದು ಆಗಬೇಕಾಗಿತ್ತು. ನಮಗ ಸಮಾಜದಾಗ ಬಾಳಲಿಕ್ಕೆ ಅಂದಿನ ದಿನದಾಗ ಬ್ಯಾರೇ ಉಪಾಯನ ಇರ್ಲಿಲ್ಲ. ಗಂಗಾನ ತ್ಯಾಗದ ಸಮಾಧಿ ಮ್ಯಾಲೆ ನಮ್ಮ ಮಹಲುಗೋಳು ನಿರ್ಮಾಣ ಆದ್ವು. ಮುಂದ ಬರೋ ಬೀಗರಿಗಷ್ಟ ಅಲ್ಲಾ ಎಲ್ಲಾರಿಗೂ ಉತ್ತರ ಕೊಡ್ಲಿಕ್ಕಾತು. ಆದರ ಈ ಸತ್ಯಾನ ನಾವೆಲ್ಲಾ ಅಗದು ಹೊಟ್ಯಾಗಿಟಗೊಂಡು ನುಂಗಿಬಿಟ್ವಿ. ಹೊರಗ ಬರಧಾಂಗ... ಜೀರ್ಣಗೊಹಾಂಗ...

ಅದೇನ ಶಾಪ ಕಳಧ್ವಾಂಗಾತೋ ಗೊತ್ತಿಲ್ಲ, ಮುಂದೆಲ್ಲ ಪಟಪಟ ಛೊಲೋ ಆಗಲಿಕ್ಕತ್ತು. ನೀಲೂ ಹತ್ತನೇತ್ತಾ ಮುಗಸಿದ್ಲು. ಕಾಲೇಜು ಕಟ್ಟಿ ಹತ್ತಿದ್ರೂ ಪಿ.ಯು.ಸಿ. ಪರೀಕ್ಷಾ ಬರೀಲಿಕ್ಕಾಗಲಿಲ್ಲಾ. ಮಾಮಾ ಛೊಲೊ ಸಂಬಂಧ ತಂದಾ. ಬೆಳಗಾವ್ಯಾಗ ಮದಿವ್ಯಾತು. ಅವ್ವಗ ಎಷ್ಟ ಆನಂದ ಆಗಿತ್ತಂದರ... ಮುಂದ ಹೌರಗ ನಂದು ಸುರುವಾತು. ನೀಲೂನ ಬಾಳಂತನಾ ಆತು. ಅವ್ವಗೂ ಪೆನ್ಷನ್ ಆತು. ಈಗ ಅಕಿ ಕೈಲೇನೂ ಅಷ್ಟ ಕೆಲಸಾ ಆಗತಿದ್ದಿದ್ದಿಲ್ಲ. ಎಲ್ಲಾ ಗಂಗಾಂದ. ಗಂಗಾನ ಜೋರು ಮಾಡಿ ನಂದೂ ಮದವಿ ಮಾಡಿದ್ಲು. ಆವಾಗನ ಖಾನಾಪುರದಾಗ ಬಾಳಂತನದ ಕೆಲಸಾ ಮಾಡತಿದ್ದದ ಮನಿಯಾವ್ರು ಭೆಟ್ಟಿಯಾಗಿದ್ರಂತ. 'ಬಂಗಲೆ, ತ್ವಾಟ, ಹೊಲಾ ನೋಡಕೊಳ್ಳಾವ್ರು ಯಾರಿಲ್ಲಾ. ನೋಡಕೊತಿದ್ರ ಛೋಲೊ ಪಗಾರ ಕೊಡತೇವಿ' ಅಂದ್ರಂತ. ಮಾಮಾಗ ಪತ್ರ ಬರದರು. 'ಎಷ್ಟ ದಿವ್ಸಂತ ಮಗನ್ನ ಅವ್ರ ಮನ್ಯಾಗ